**<u>ಸಿವಿಲ್ ಮತ್ತು  ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ</u>**

**ಸಿ.ಸಿ. ನಂ. 134/2023**

| | | | |
|---|---|---|---|
| **ಹೆಸರು** | **:** | **ಶರಣಗೌಡ** | **ದೋ.ಸಾ. 3** |
| **ತಂದೆಯ ಹೆಸರು** | **:** | **ಪರಮೇಶ್ವರ** | **ಪ್ರಾ.ಸಾ. 2** |
| **ವಯಸ್ಸು** | **:** | **36 ವರ್ಷ** | **ದಿನಾಂಕಃ 27-02-2024** |
| **ಉದ್ಯೋಗ** | **:** | **ಒಕ್ಕಲುತನ** | |
| **ವಾಸಸ್ಥಳ** | **:** | **ಹೊಸ್ಸಳ್ಳಿ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>**

ಈ ಪ್ರಕರಣದ ಸಾಕ್ಷಿದಾರರಾದ ಚಾಸಾ-2 ನನಗೆ ಗೊತ್ತು.  ಆತ ನಮ್ಮ ಊರಿನವನು.  ಚಾಸಾ-1 ಮತ್ತು 4 ರಿಂದ 6 ನನಗೆ ಗೊತ್ತಿಲ್ಲ.

ಈಗ ನನಗೆ ತೋರಿಸಲಾದ ನಿಪಿ-1 ರಿಂದ 3 ದಾಖಲೆಗಳಲ್ಲಿರುವ ಸಹಿ ನನ್ನದೇ. ಸಾಕ್ಷಿ ನೋಡಿ ಗುರುತಿಸಿದ ಸಹಿಗಳನ್ನು ಕ್ರಮವಾಗಿ ನಿಪಿ-1(ಬಿ), 2(ಬಿ) ಮತ್ತು 3(ಬಿ) ಎಂದು ಗುರುತಿಸಲಾಯಿತು.

ಈಗ್ಗೆ ಎರಡು ವರ್ಷಗಳ ಹಿಂದೆ ನನ್ನನ್ನು  ತಮ್ಮ ಕಚೇರಿಗೆ ಕರೆಸಿದ್ದ ಅಬಕಾರಿ ಪೋಲೀಸರು ನಿಮ್ಮ ಊರಿನವನಾದ ಆರೋಪಿಯನ್ನು ಹಿಡಿದುಕೊಂಡು ಬಂದಿದ್ದೇವೆ ಎಂದು ನನಗೆ ಹೇಳಿ ನಿಪಿ-1 ರಿಂದ 3ರ ದಾಖಲೆಯ ಮೇಲೆ ನನ್ನ ಸಹಿಗಳನ್ನು ಪಡೆದಿರುತ್ತಾರೆ. ಸದರಿ ಸಹಿಗಳನ್ನು ಯಾವ ಉದ್ದೇಶಕ್ಕೆ ಪಡೆಯಲಾಯಿತು ಎನ್ನುವುದು ನನಗೆ ಗೊತ್ತಿಲ್ಲ. ನಿಪಿ-1 ರಿಂದ 3 ರ ದಾಖಲೆಗಳಲ್ಲಿ ಏನು ಬರೆದಿದೆ ಎನ್ನುವುದು ನನಗೆ ಗೊತ್ತಿಲ್ಲ. ಪೋಲೀಸರು ಅದನ್ನು ನನಗೆ ಓದಿ ಹೇಳಿಲ್ಲ.

ಈ ದಿನ ನ್ಯಾಯಾಲಯದ ಮುಂದೆ ಹಾಜರಿರುವ ಈ ಪ್ರಕರಣದ ಆರೋಪಿ ಶರಣಪ್ಪ ನನಗೆ ಗೊತ್ತು.  ಆತ ನಮ್ಮ ಊರಿನವನು.   ಪೋಲೀಸರು ನನ್ನ ಸಮಕ್ಷಮ ಆರೋಪಿ ಮೇಲೆ ಯಾವುದೇ ದಾಳಿ ಮಾಡಿಲ್ಲ,  ಪಂಚನಾಮೆ ಜರುಗಿಸಿ ನನ್ನ ಸಮಕ್ಷಮ ಯಾವುದೇ ವಸ್ತುವನ್ನು ಜಪ್ತಿ ಮಾಡಿಲ್ಲ.

(ಈ ಹಂತದಲ್ಲಿ ತನಿಖಾಧಿಕಾರಿಯವರರು ನಡೆಸಿರುವ ಪಂಚನಾಮೆಗೆ ಸಾಕ್ಷಿ ಸಂಪೂರ್ಣ ಪ್ರತಿಕೂಲ ಸಾಕ್ಷ್ಯ ನುಡಿಯುತ್ತಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೊಡುವಂತೆ ಸ.ಸ.ಅ.ರವರು ಅನುಮತಿ ಕೋರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

**<u>ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>**

ದಿನಾಂಕ 12-04-2022 ರಂದು ಬೆಳಿಗ್ಗೆ 11-30 ಗಂಟೆ ಸುಮಾರಿಗೆ ಚಿಂಚೋಳಿ ಅಬಕಾರಿ ಅಧಿಕಾರಿಗಳು ಹೆಚ್.ಹೊಸ್ಸಳ್ಳಿ ಗ್ರಾಮದಲ್ಲಿರುವ ಆರೋಪಿ ಶರಣಪ್ಪನ ಹೋಟೆಲ ಬಳಿ ನನ್ನನ್ನು ಮತ್ತು ಚಾಸಾ-2 ರವರನ್ನು ಅವರ ವಾಹನದಲ್ಲಿ ಕರೆದುಕೊಂಡು ಹೋಗಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದ ಆರೋಪಿ ಮೇಲೆ ದಾಳಿ ಮಾಡಲು ನಮ್ಮ ಸಮಕ್ಷಮ ನಿಪಿ-1 ರ ಶೋಧನಾ ಸಮುಚಿತವನ್ನು ತಯಾರಿಸಿಕೊಂಡರು ಎನ್ನುವುದು ಸರಿಯಲ್ಲ. ಅಬಕಾರಿ ಅಧಿಕಾರಿ ಆರೋಪಿ ಹೋಟೆಲ ಮೇಲೆ ನಮ್ಮ ಸಮಕ್ಷಮ ದಾಳಿ ಮಾಡಿದಾಗ ಆತನ ಹೋಟೆಲನಲ್ಲಿ 90 ಎಮ್.ಎಲ್.ನ 90 ಓರಿಜಿನಲ್ ಚಾಯಿಸ್ ಪೌಚಗಳು, 180 ಎಮ್.ಎಲ್.ನ 24 ಓ.ಟಿ. ಪೌಚಗಳು ಮತ್ತು 330 ಎಮ್.ಎಲ್.ನ 31 ಕೆ.ಎಫ್. ಸ್ಟ್ರಾಂಗ್ ಟಿನ್ ಬಾಟಲಿಗಳು ಅಕ್ರಮವಾಗಿ ಸ್ವಾಧೀನ ಹೊಂದಿದ್ದರಿಂದ ಅವುಗಳನ್ನು ಬೆಳಿಗ್ಗೆ 11-30 ರಿಂದ ಮಧ್ಯಾಹ್ನ 12-30 ಗಂಟೆಯವರೆಗೆ ನಮ್ಮ ಸಮಕ್ಷಮ ಜಪ್ತು ಮಾಡಿ ನಿಪಿ-2 ರ ಪಂಚನಾಮೆಯನ್ನು ಬರೆದು ರಾಸಾಯನಿಕ ಪರೀಕ್ಷೆಗೆ ಪ್ರತ್ಯೇಕವಾಗಿ ತೆಗೆದಿರಿಸಿದ 20 ಓರಿಜಿನಲ್ ಚಾಯಿಸ್ ಪೌಚಗಳು, 10 ಓ.ಟಿ. ಪೌಚಗಳು ಮತ್ತು ಒಂದು ಕೆ.ಎಫ್. ಸ್ಟ್ರಾಂಗ್ ಟಿನ್ ಬಾಟಲಿಗಳನ್ನು ಬಿಳಿ ಬಟ್ಟೆಯಿಂದ ಸುತ್ತಿ ಸೀಲ್ ಮಾಡಿ ನಿಪಿ-3 ರ ಮಾದರಿ ಸೀಲು ಪತ್ರ ತಯಾರಿಸಿದರು ಎನ್ನುವುದು ಸರಿಯಲ್ಲ.

ನಿಶಾನೆ ಪಿ-1 ರಿಂದ 3 ರ ದಾಖಲೆಗಳ ಮೇಲೆ ಪೊಲೀಸರು ನನ್ನ ಸಹಿಗಳನ್ನು ಆರೋಪಿ ಹೋಟೆಲನಲ್ಲಿ ಪಡೆದಿದ್ದರು ಎನ್ನುವುದು ಸರಿಯಲ್ಲ.

ನಿಪಿ-1 ರಿಂದ 3 ರ ದಾಖಲೆಯನ್ನು ಪೋಲೀಸರು ನನಗೆ ಓದಿ ಹೇಳಿದ್ದರು ಎನ್ನುವುದು ಸರಿಯಲ್ಲ. ಪೋಲೀಸರು ನನ್ನ ಸಮಕ್ಷಮ ನಿಪಿ-2 ರ ಪಂಚನಾಮೆಯನ್ನು ಜರುಗಿಸಿದ್ದರೂ ಸಹ ನನ್ನ ಚಿಕ್ಕಪ್ಪನ ಮಗನಾದ ಆರೋಪಿಗೆ ಸಹಾಯ ಮಾಡುವ ಸಲುವಾಗಿ ಈಗ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ ಎನ್.ಸಿ.ಹೆಚ್ . ವಕೀಲರಿಂದಃ ಇಲ್ಲಾ</u>**

**ಮರುವಿಚಾರಣೆಃ ಇಲ್ಲಾ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಪ್ರ.ದ.ನ್ಯಾ.ದಂ. ಚಿಂಚೋಳಿ**